ಹೊರಗೆ ಬಂದ.

ಅನ್ನ ಖಾಲಿಯಾಗತೊಡಗಿತು. ಕೊನೆಯ ಪಂಕ್ತಿ. ಹೆಣ್ಣಿನ ಕಡೆಯವರಲ್ಲಿ ಕಟ್ಟಕಡೆಯ ಗಂಡಸನ್ನು ಕೂಡಾ ಹುಡುಕಿ ಕೂಡಿಸಿದರು. ಕೊನೆಗೆ ಉಳಿದದ್ದು ಶರೀಫ್ ಮತ್ತು ಅಸ್ಲಾಂ. ಹಿಂದಿನ ಪಂಕ್ತಿಗೆ ತಲೆಮಾಂಸ ಪಲ್ಯ ಕೂಡಾ ಖಾಲಿಯಾಗಿತ್ತು. ಇನ್ನು ಉಳಿದದ್ದು ಪಂಕ್ತಿಯಲ್ಲಿನ ಗಂಡಸರಿಗೆ, ಮತ್ತು ಹೆಂಗಸರಿಗೆ ಏನೂ ಉಳಿದಿಲ್ಲವೆಂದು ಗೊತ್ತಾಯಿತು. ಗಂಡಸರು ಸಿಟ್ಟಿನಿಂದ ಗುಸುಗುಸು ಮಾತನಾಡುತ್ತಿದ್ದರೂ ಹೆಂಗಸರು ಮಾತ್ರ ಕಿಮಿಕ್ ಅನ್ನದೇ ಕುಳಿತಿದ್ದರು.

ಇಷ್ಟರಲ್ಲಿ ಮದುವೆ ಮನೆಯಲ್ಲಿ ಗಲಾಟೆ ಶುರುವಾಯಿತು. ಯಾರೋ ಜೋರಾಗಿ ಅಳುತ್ತಿದ್ದರು. ದಬದಬನೆ ಶಬ್ದ ಕೇಳಿಸುತ್ತಿತ್ತು.

ಮನೆಯೊಳಗಿಂದ ಅಸ್ಲಾಂನ ಬಳಿಗೆ ಓಡಿ ಬಂದ ಷರೀಫ್. ಅಸ್ಲಾಂನಿಗೆ ಗಾಬರಿಯಾಯಿತು. 'ಅಸ್ಲಾಮಾ ಅಬಿದಾ ಗಂಡ ಪಂಕ್ತಿಯಲ್ಲಿ ಕೂತಾಗ ನೀನು ಅಲ್ಲಿ ಇರಲಿಲ್ಲವಾ?' ಎಂದರು ಷರೀಫ್. 'ಇಲ್ಲ ಬಾವಾ.. ಏನಾಯ್ತು ?' ಗಾಬರಿಯಿಂದ ಕೇಳಿದ.

'ಎಲ್ಲ ಹಾಳಾಗೋಯ್ತು. ಅವನೊಬ್ಬ ನಸ್ಲಿಹರಾಮ್ ನನ್ ಮಗ. ಎಲೆಯಲ್ಲಿ ತುಂಡುಗಳಿಲ್ಲವೆಂದು ಹೆಂಡತಿಯನ್ನು ಸಾಯೋ ಹಾಗೇ ಹೊಡಿತಿದ್ದಾನೆ' ಎಂದರು ಷರೀಫ್.

ಅಸ್ಲಾಂ ಮನೆಯೊಳಕ್ಕೆ ಓಡಿದ. ಅಬಿದಾ ತಲೆಕೂದಲೆಲ್ಲಾ ಕೆದರಿ ಹೋಗಿತ್ತು. ಸೀರೆ ಅಸ್ತವ್ಯಸ್ತವಾಗಿತ್ತು. ಅವಳ ಗಂಡ ಆಕೆಯನ್ನು ಕೈಯಿಂದ ಕಾಲಿನಿಂದ ಒದೆಯುತ್ತಿದ್ದ. 'ಮರ್ಯಾದೆ ಗೊತ್ತಿಲ್ಲದ ಮನೆಗೆ ಬ್ಯಾಡ ಅಂದಿದ್ದೆ. ಊಟಕ್ಕೆ ಬಾತುಕೊಂಡು ಇಲ್ಲಿ ಬಂದ್ನಾ? ಒಬ್ಬರಿಗೆ ಒಂದು ರೀತಿ ಮರ್ಯಾದೆ? ಮತ್ತೊಬ್ಬರಿಗೆ ಇನ್ನೊಂದು ಮರ್ಯಾದೆನಾ? ಯಾರ್‍ಯಾರಿಗೋ ಪಲಾವು-ಪೀಸುಗಳು, ನನಗಾದರೆ ತಲೆಮಾಂಸಾನಾ? ಬಾರೇಸೂಳೆ... ಮನೆಗೆ ಬಾ ನಿನ್ನ ಕಥೆ ನೋಡ್ತೀನಿ...' ಎಂದು ಅಬಿದಾ ತಲೆಕೂದಲನ್ನು ಹಿಡಿದು ಎಳೆಯತೊಡಗಿದ.

ಅವನ ಸಿಟ್ಟು ನೋಡಿ ಅಸ್ಲಾಂಗೆ ಮಾತು ಹೊರಡಲಿಲ್ಲ. ಯಾರು ಅಡ್ಡ ಹೋದರೂ ಅವನು ಕೇಳುತ್ತಿರಲಿಲ್ಲ. ಅಬಿದಾ ಅಳುತ್ತಲೇ ಸೂಟ್‌ಕೇಸನ್ನು ಹಿಡಿದು ಕಂಕುಳಲ್ಲಿ ಮಗುವನ್ನೆತ್ತಿಕೊಂಡು ಅವನ ಹಿಂದೆ ನಡೆದಳು.

ಅಬಿದಾಳ ಅಣ್ಣಂದಿರಿಗೆ, ತಂಗಿಯರಿಗೆ ರಕ್ತ ಕುದಿಯಿತು. ಮನೆ ಅಳಿಯನಿಗೆ ಅವಮಾನವಾಗಿದ್ದಕ್ಕೆ ಶರೀಫರ ಮೇಲೆ ಯುದ್ಧಕ್ಕೆ ನಿಂತರು. ಶರೀಫರ ಬೆಂಬಲಕ್ಕೆ ಕೆಲವರು ಮುಂದಕ್ಕೆ ಬಂದರು. ಕ್ಷಣಗಳಲ್ಲಿ ಮಾತಿಗೆ ಮಾತು ಬೆಳೆದು, ಗಲಾಟೆ ಮುಗಿಲು ಮುಟ್ಟಿತು. ಚಿಕ್ಕಮಕ್ಕಳು ಹೆದರಿಕೆಯಿಂದ ಅಳತೊಡಗಿದರು.

ಅಸ್ಲಾಂಗೆ ಅಸಹ್ಯವಾಯಿತು. ತಮಾಷೆ ನೋಡುತ್ತಿರುವಂತೆ ನಿಂತಿದ್ದ ಗಂಡಿನ ಕಡೆಯವರ ಎದುರು ಅವಮಾನವಾಗಿದ್ದಕ್ಕೆ ಅವನ ಮುಖ ಕೆಂಪಗಾಯಿತು. ಇಷ್ಟು ಚಾಕರಿ ಮಾಡಿ, ಇಷ್ಟು ಕಷ್ಟಪಟ್ಟರೂ ಕೊನೆಯ ಕ್ಷಣದಲ್ಲಿ ನಗೆಪಾಟಲಾದದ್ದಕ್ಕೆ ಕಣ್ಣುಗಳಿಂದ ಪಟಪಟನೆ ಹನಿಗಳು ಉದುರಿದವು.

ಇನ್ನು ಮದುಮಗಳು ಅತ್ತೆ ಮನೆಯಲ್ಲಿ ಹೆಜ್ಜೆ ಇಟ್ಟಾಗಿನಿಂದ ಈ ಗಲಾಟೆಯೇ ಆ ಹೆಣ್ಣು ಮಗುವನ್ನು ಹುರಿದು ತಿನ್ನಲು ದೊಡ್ಡ ಸಬೂಬಾಗುತ್ತದೆಯೆಂದು ತಿಳಿದು ಅವನಿಗೆ ತಡೆಯಲಾಗಲಿಲ್ಲ.

ಆವೇಶದಿಂದ ಏದುಸಿರು ಬಿಡುತ್ತಾ, ದೊಡ್ಡ ದನಿಯಲ್ಲಿ ಕೂಗಿದ. 'ಲೋ...! ಅಲ್ಲಾ ನನಗೆ ಹೆಣ್ಣುಮಕ್ಕಳನ್ನು ಕೊಡಲಿಲ್ಲ. ಕೊಟ್ಟಿದ್ರೆ ಅವರನ್ನು ಕೊಚ್ಚಿ ಹಾಕ್ತಿದ್ದೇನಾಗಲೀ ಇಂಥ ಮದುವೆ ಮಾತ್ರ ಮಾಡ್ತಿರಲಿಲ್ಲ. ಇಂಥ 'ಧವ್ವಾ' ನನ್ಮಕ್ಕಳ ಕೈಯಲ್ಲಿಟ್ಟು ಅವರ ಕತ್ತು ಕೊಯ್ಯೋ ಕೆಲಸ ಮಾತ್ರ ಮಾಡ್ತಿರಲಿಲ್ಲ. ಒಂದು ಗಂಡು- ಹೆಣ್ಣು ಸೇರಿ ಸಂಸಾರ ಮಾಡಬೇಕೆಂದರೆ ಇಷ್ಟು ಗಲಾಟೆ ಯಾಕ್ರಲೇ. ಇಷ್ಟು ಖರ್ಚು ಯಾಕ್ರೋ? ಇಷ್ಟು ಜನ ಯಾಕ್ರೋ? ನನ್ ಮಕ್ಳೇ...'

ಅವನ ಮಾತುಗಳು ಯಾರಿಗೂ ಕೇಳಿಸುತ್ತಿರಲಿಲ್ಲ.

ಒಳಗೆ ಗಂಡಸರು ಬೈದುಕೊಳ್ಳುತ್ತಾ ಅಡ್ಡ ಬಂದ ಅವರ ಹೆಂಡಂದಿರನ್ನು ಕೆಳಗೆ ಬೀಳಿಸಿ ಒದೆಯುತ್ತಿದ್ದರು. ಆ ದಿನ ಹೆಣ್ಣಿನ ಕಡೆಯವರಲ್ಲಿ ಅಳದೇ ಇದ್ದ ಹೆಣ್ಣುಮಕ್ಕಳಿಲ್ಲ.

●